ಕತೆಯನ್ನೆಲ್ಲಾ ಸಹನೆಯಿಂದ ಕೇಳಿದ ನಾನು "ವೆಂಕಯ್ಯ, ತೆಲುಗು ಸಿನಿಮಾ ವಿಪರೀತ ನೋಡೋದು ಒಳ್ಳೇದಲ್ಲ ಕಣ್ರೀ..." ಎಂದು ಹೇಳಿ, ಕಣ್ಣು ಹೊಡೆದು, ಅವನ ಕೈ ಕುಲುಕಿ, ವಾಪಸು ಕಂಪೆನಿಯ ಕಡೆಗೆ ನಡೆದೆ. ಅವನಿಗೆ ಒಳ್ಳೆಯ ಸಂಬಳವನ್ನು ಕೊಡೋಣ ಎಂದು ಮನಸ್ಸಿನಲ್ಲಿಯೇ ನಿರ್ಧರಿಸಿದೆ. ಒಂದು ತರಹದ ಉಲ್ಲಾಸದಿಂದ ಮನಸ್ಸು ನಲಿಯುತ್ತಿತ್ತು.

★★★

ಕಾಲೇಜಿನಲ್ಲಿಯೇ ಹುಡುಗಿಯನ್ನು ಪ್ರೀತಿಸಿ, ಮದುವೆಗೆ ಒಪ್ಪಿಸಿ ಓಡಿಸಿಕೊಂಡು ಹೋದ ವೆಂಕಯ್ಯ, ಸಹಜವಾಗಿಯೇ ಕಂಪೆನಿಯಲ್ಲಿಯೂ ಅತ್ಯಂತ ಲವಲವಿಕೆಯಿಂದ ಎಲ್ಲರ ಗಮನ ಸೆಳೆದ. ವೆಂಕಯ್ಯ ಎನ್ನುವ ಹೆಸರು ಎಲ್ಲರ ಬಾಯಲ್ಲೂ 'ವೆಂಕ್ಸ್' ಎಂದು ಮರುನಾಮಕರಣವಾಯ್ತು. ಕಂಪೆನಿ ಸೇರಿದ ಒಂದೆರಡು ದಿನಗಳಲ್ಲಿಯೇ ಎಲ್ಲರ ಪರಿಚಯ ಮಾಡಿಕೊಂಡುಬಿಟ್ಟ. ಎಷ್ಟೋ ವರ್ಷಗಳಿಂದ ಪರಿಚಿತನೋ ಎಂಬಂತೆ ಸಹೋದ್ಯೋಗಿಗಳು ಆಗೊಮ್ಮೆ ಈಗೊಮ್ಮೆ ಅವನ ಬಳಿ ಹೋಗಿ ಮಾತನಾಡಿಸುತ್ತಿದ್ದರು. ಐದನೆಯ ಮಹಡಿಯಲ್ಲಿ ಕೂಡುತ್ತಿದ್ದ ವೆಂಕಯ್ಯನಿಗೆ ಮನೆಯಲ್ಲಿ ಮಾಡಿದ ಹೊಸರುಚಿಯನ್ನು ಕೊಡುವ ನೆಪದಲ್ಲಿ ನೆಲಮಹಡಿಯಿಂದ ಹುಡುಗಿಯರು ಬರುತ್ತಿದ್ದರು. ಮಧ್ಯಾಹ್ನದ ಊಟದ ಹೊತ್ತಿನಲ್ಲಿ ಹೆಚ್ಚು ಕಡಿಮೆ ಅವನು ಕುಳಿತ ಮೇಜಿನ ಕಡೆ ಒಂದು ದೊಡ್ಡ ಗುಂಪೇ ನೆರೆದಿರುತ್ತಿತ್ತು. ನಗು, ಕೇಕೆ, ಅಬ್ಬರಗಳು – ಅಲ್ಲಿ ಕೇಳಿಸುತ್ತಿದ್ದವು.

ಕೆಲಸದಲ್ಲಿಯೂ ಅವನ ಕುಶಲತೆ ವಿಶಿಷ್ಟವಾಗಿತ್ತು. ಕೊಟ್ಟ ಕೆಲಸಗಳನ್ನು ನೆಪವಿಲ್ಲದಂತೆ ಅತ್ಯಂತ ಬೇಗ ಮಾಡಿ ಮುಗಿಸಿ ಬಿಡುತ್ತಿದ್ದ. ಯಾವ ಹೊತ್ತಿನಲ್ಲಿ ಅವನು ಕೆಲಸ ಮಾಡುತ್ತಿದ್ದನೋ ಎಂದು ನಮಗೆ ಅನುಮಾನವಾಗುವ ಹಾಗೆ ವರ್ತಿಸುತ್ತಿದ್ದ. ಉಳಿದ ಸಹೋದ್ಯೋಗಿಗಳಿಗೂ ಸಾಕಷ್ಟು ಸಹಾಯ ಮಾಡುತ್ತಿದ್ದ. ಚಿಕ್ಕಂದಿನಲ್ಲಿಯೂ ಹಳ್ಳಿಯಲ್ಲಿಯೇ ಬೆಳೆದು, ತೆಲುಗು ಮಾಧ್ಯಮದಲ್ಲಿ ಓದಿದವನಾದ್ದರಿಂದ ಅವನ ಇಂಗ್ಲಿಷ್ ಚೆನ್ನಾಗಿರಲಿಲ್ಲ. ಆದರೆ ಸಾಫ್ಟ್‌ವೇರ್ ಕಂಪೆನಿಯಲ್ಲಿ ಕೆಲಸ ಮಾಡಲು ಇಂಗ್ಲಿಷ್‌ನ ಅವಶ್ಯಕತೆಯೇ ಇಲ್ಲವೆಂಬಂತೆ ವರ್ತಿಸುತ್ತಿದ್ದ. ಅವನಿಗೆ ಇಂಗ್ಲಿಷ್ ಭಾಷೆ ಬರದಿದ್ದರೂ, ಕನ್ನಡ, ತಮಿಳು, ಮಲಯಾಳಂ ಮತ್ತು ಹರಕು ಮುರುಕು ಹಿಂದಿ ಬರುತ್ತಿತ್ತು. ಎಲ್ಲರೊಡನೆಯೂ ಅವರವರ ಮಾತೃಭಾಷೆಯಲ್ಲಿ ಮಾತನಾಡಿ ಬರುತ್ತಿದ್ದ. ಶುಕ್ರವಾರದ ಸಂಜೆಯ ಹೊತ್ತು ನಡೆಯುತ್ತಿದ್ದ ಅಂತ್ಯಾಕ್ಷರಿ ಹಾಡಿನ ಬಂಡಿಯಲ್ಲಿ, ಈವರೆಗೆ ಕೇವಲ ಬಾಲಿವುಡ್ ಭಾಷೆಯ ಹಾಡುಗಳಿಗೆ ಪ್ರವೇಶವಿದ್ದದನ್ನು ಪೂರ್ತಿಯಾಗಿ

**ವೆಂಕಯ್ಯನನ್ನು ಗುರುತು ಹಿಡಿಯಲು ನನಗೆ ಸ್ವಲ್ಪ ಸಮಯವೇ ಬೇಕಾಯ್ತು. ಮೊಣಕಾಲ ಮೇಲೆ ಕಚ್ಚೆ ಹಾಕಿ ಉಟ್ಟ ಪಂಚೆ, ಕಾಲುಗಳಿಗೆ ಬೆಳ್ಳಿಯ ಕಡಗ, ರೋಮಭರಿತ ಎದೆಯ ಮೇಲೆ ಹೊದ್ದ ಒಂದು ಹರಕು ಕಂಬಳಿ, ಮರದ ದೊಡ್ಡ ಹಿಡಿಕೆಯ ಕೊಡಲಿ, ಕೊರಳಲ್ಲಿ ಹುಲಿಯುಗುರಿನ ಪದಕದ ಸರ, ಬಲತೋಳಿಗೆ ಬಿಗಿಯಾಗಿ ಕಟ್ಟಿದ ಬೆಳ್ಳಿ ತಾಯಿತ...**